**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 66/2013</u>**

ದಿನಾಂಕ: 11.01.2023
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 29 ಪ್ರಾಸಾ - 18

| | | |
|---|---|---|
| ಹೆಸರು | ಃ | ಸಿದ್ದರಾಜು ಬಿ. |
| ತಂದೆಯ ಹೆಸರು | ಃ | ಬೊಮ್ಮಲಿಂಗಯ್ಯ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | ಃ | ನಿವೃತ್ತ ಪೊಲೀಸ್ ಇನ್ಸ್ ಪೆಕ್ಟರ್ |
| ವಾಸಸ್ಥಳ | ಃ | ನೆಲಮಂಗಲ |

<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>

ನಾನು ದಿನಾಂಕ 21.04.2012 ರಿಂದ 21.05.2012 ರವರೆಗೆ ಪ್ರಭಾರ ಪಿಎಸ್ಐ ಆಗಿ ದೊಡ್ಡಬೆಲವಂಗಲ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡಿದ್ದೆ.

2.ದಿನಾಂಕ 10.05.2012 ರಂದು ಬೆಳಿಗ್ಗೆ 9 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿ ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿದೆ. ಸದರಿ ದೂರನ್ನು ಈಗಾಗಲೇ ನಿಶಾನೆ ಪಿ 2 ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ

ಪಿ 2(ಬಿ) ಎಂದು ಗುರುತಿಸಿದೆ. ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ 20 ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 20(ಎ) ಎಂದು ಗುರುತಿಸಿದೆ.

3. ಆನಂತರ ಕಡತವನ್ನು ಚಾಸಾ 32 ರವರಿಗೆ ನೀಡಿದೆ.

4. ಆನಂತರ ದಿನಾಂಕ 10.05.2012 ರಂದು ಸಿಪಿಐ ರವರ ಆದೇಶದ ಮೇರೆಗೆ ಆರೋಪಿತರೆಲ್ಲರನ್ನು ವಶಕ್ಕೆ ಪಡೆದು, ಅವರ ಮುಂದೆ ಹಾಜರುಪಡಿಸಿದೆ. ಆ ಬಗ್ಗೆ ನೀಡಿದ ನಿವೇದನೆಯನ್ನು ನಿಶಾನೆ ಪಿ 21 ಎಂತಲೂ, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 21(ಎ) ಎಂದು ಗುರುತಿಸಿದೆ. ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿತರನ್ನು ಸಾಕ್ಷಿದಾರರು ಗುರುತಿಸಿದ್ದು, ಅವರನ್ನೇ ವಶಕ್ಕೆ ಪಡೆದಿರುತ್ತೇನೆ ಎನ್ನುತ್ತಾರೆ. 3 ನೇ ಆರೋಪಿತರು ಈ ದಿನ ಗೈರು ಹಾಜರಾಗಿದ್ದು, ಅವರ ಬಗ್ಗೆ ಸಲ್ಲಿಸಿದ ಕಲಂ.273 ರ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.

<u>ಪಾಟೀ ಸವಾಲು:</u> ಶ್ರೀ.ಕೆ.ತಿಮ್ಮೇಗೌಡ ವಕೀಲರಿಂದ – ಆರೋಪಿತರ ಪರವಾಗಿ:-

5. ಪಿರ್ಯಾದುದಾರರು ದೂರನ್ನು ಟೈಪ್ ಮಾಡಿಸಿಕೊಂಡು ಬಂದಿದ್ದರು. ಅವರು ಟೈಪ್ ಮಾಡಿಸಿಕೊಂಡು ಬಂದಿಲ್ಲ ಮತ್ತು ನಾವೇ ನಮ್ಮ ಠಾಣೆಯಲ್ಲಿ ನಮಗೆ ಅನುಕೂಲವಾಗುವಂತೆ ಟೈಪ್ ಮಾಡಿಸಿ

ಅವರ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಬೆಳಿಗ್ಗೆ 8.30 ಕ್ಕೆ ಬಂದಿದ್ದು, 9 ಗಂಟೆಗೆ ದೂರು ದಾಖಲಿಸಿಕೊಂಡೆವು. ಬೆಳಿಗ್ಗೆ 9.30 ಕ್ಕೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ. ಅದನ್ನು ನಮ್ಮ ಮೇಲಧಿಕಾರಿಗಳ ಮಾತು ಕೇಳಿಕೊಂಡು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

6.ಚೌಡಯ್ಯನ ಪಾಳ್ಯದಲ್ಲಿ ಆರೋಪಿತರನ್ನು ವಶಕ್ಕೆ ಪಡೆದೆ. ನಾನು ಸಿಬ್ಬಂದಿಗಳ ಜೊತೆಯಲ್ಲಿ ವಶಕ್ಕೆ ಪಡೆದೆ. ಆರೋಪಿತರ ಭಾವಚಿತ್ರ ಮತ್ತು ಚಹರೆಯನ್ನು ನನಗೆ ನೀಡಿಲ್ಲ. ಆರೋಪಿತರನ್ನು ವಶಕ್ಕೆ ಪಡೆದ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಅವರನ್ನು ಅಲ್ಲಿ ವಶಕ್ಕೆ ಪಡೆದಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 21 ನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ.

7.ನಿಶಾನೆ ಪಿ 20 ನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.